**ದಿನಾಂಕಃ 10-06-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಮುಂದುವರೆದ ಪಾಟೀ_ಸವಾಲುಃ_ಅರ್ಜಿದಾರಳ_ಪರ_ವಕೀಲರಿಂದಃ**

10. ಈ ಪ್ರಕರಣದ ಅರ್ಜಿದಾರಳು ನನ್ನನ್ನು ಮದುವೆಯಾಗಿದ್ದಾಳೆ ಎಂದು ಆರೋಪಿಸಿ ನನ್ನ ಹೆಂಡತಿ ಶಿರಾಳಕೊಪ್ಪದಲ್ಲಿ ದೂರು ನೀಡಿದ್ದರು ಎಂದರೆ ಸರಿಯಲ್ಲ. ನನ್ನ ವರ್ಕಶಾಪ್ ನಲ್ಲಿ ಕೆಲಸ ಮಾಡುತ್ತಿದ್ದ ಫಾರುಕ್ ಅಲಿ ಎನ್ನುವವರು ನಿಆರ್-8 ರಲ್ಲಿರುವ ದೃಶ್ಯವನ್ನು ವಿಡಿಯೋ ಮಾಡಿಕೊಂಡಿದ್ದಾರೆ. ನನ್ನ ಮಗನೇ ಸದರಿ ವಿಡಿಯೋ ರೆಕಾರ್ಡ ಮಾಡಿಕೊಂಡಿದ್ದಾನೆ ಎಂದರೆ ಸರಿಯಲ್ಲ. ನಾನು ಅರ್ಜಿದಾರಳಿಗೆ ಹೊಡೆಯುತ್ತಿರುವ ದೃಶ್ಯವನ್ನು ಉದ್ದೇಶಪೂರ್ವಕಾಗಿ ರೆಕಾರ್ಡ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ . ನಾನು ಈಗ ಒಂದು ಪೋಟೊ ನೋಡುತ್ತಿದ್ದು, ಅದರಲ್ಲಿ ನಜರುನ್ನೀಸಾ ಇರುವುದು ಕಂಡು ಬರುತ್ತದೆ. ಸದರಿ ದಾಖಲೆಯನ್ನು ನಿಪಿ-10 ಎಂದು ಗುರುತಿಸಲಾಯಿತು. ನಿಪಿ-10 ರಲ್ಲಿರುವ ಇನ್ನೊಬ್ಬ ವ್ಯಕ್ತಿ ಯಾರು ಎಂದು ಗೊತ್ತಿಲ್ಲ. ನಾನು ಹಾಗೂ ನಜರುನ್ನೀಸಾ ದಿಃ 23-12-2021 ರಂದು ಗೋವಾಗೆ ಹೋಗಿದ್ದಾಗ ಸದರಿ ಪೋಟೊ ತೆಗೆಯಲಾಗಿದೆ ಎಂದರೆ ಸರಿಯಲ್ಲ . ಈಗ ಇನ್ನೊಂದು ಪೋಟೋ ನೋಡುತ್ತಿದ್ದು, ಅದರಲ್ಲಿ ನಿಂತಿರುವುದು ನಜರುನ್ನೀಸಾ ಎಂದರೆ ನಿಜ. ಸದರಿ ಪೋಟೊವನ್ನು ನಿಪಿ-11 ಎಂದು ಗುರುತಿಸಲಾಯಿತು. ನಿಪಿ-11 ರಲ್ಲಿ ಕಾಣಿಸುತ್ತಿರುವುದು ನನ್ನ ಲೇತ್ ಮಶೀನ್ ಎಂದರೆ ಸರಿಯಲ್ಲ. ನಜರುನ್ನೀಸಾ ನನ್ನೊಂದಿಗೆ ಅಲ್ಲಿ ವಾಸಿಸುತ್ತಿದ್ದರೂ ಸಹ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

11. ಈಗ ನಾನು ಒಂದು ದೂರನ್ನು ನೋಡುತ್ತಿದ್ದು, ಅದನ್ನು ನನ್ನ ಹೆಂಡತಿ ಫಾತೀಮಾ ದಾಖಲಿಸಿದ್ದಾಳೆ ಎಂದರೆ ನಿಜ. ಸದರಿ ದೂರಿನ ಪ್ರತಿಯನ್ನು ನಿಪಿ-12 ಎಂದು

ಗುರುತಿಸಲಾಯಿತು. ನನ್ನ ಮೊದಲ ಹೆಂಡತಿ ಹುಚ್ಚಿ ಆಗಿದ್ದು, ನನ್ನನ್ನು ಬಿಟ್ಟು ಹೋಗಿದ್ದಾಳೆ ಎಂದು ಹೇಳಿ ಅರ್ಜಿದಾರಳನ್ನು ಮದುವೆಯಾಗಿದ್ದೇನೆ ಎಂದರೆ ಸರಿಯಲ್ಲ . ಸದರಿ ವಿಷಯ ನನ್ನ ಹೆಂಡತಿಗೂ ಸಹ ಗೊತ್ತಿತ್ತು ಎಂದರೆ ಸರಿಯಲ್ಲ .

12. ನಾನು ಅಡವಿ ಆಂಜನೇಯ ಬಡಾವಣೆಯಲ್ಲಿ ಸ್ವಂತ ಮನೆ ಹೊಂದಿದ್ದೇನೆ ಎಂದರೆ ಸರಿಯಲ್ಲ . ನನಗೆ ಸಾಕಷ್ಟು ಆದಾಯ ಇದ್ದರೂ ಸಹ ಅರ್ಜಿದಾರಳಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಅರ್ಜಿದಾರಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿ ಈಗ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಸಹಿ/-

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.